## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 520 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಪಾಟೀಲ್ ಇಟಗಿ.<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16.09.2021 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ನಗರಾಭಿವೃದ್ಧಿ ಪ್ರಾಧಿಕಾರ ಬಡಾವಣೆಯಲ್ಲಿ (ಬಿಡಿಎ) ಅನಧಿಕೃತವಾಗಿ ಖಾಲಿ ಇರುವ ನಿವೇಶನ ಜಾಗದಲ್ಲಿ ಅಕ್ರಮವಾಗಿ ಭೂಗಳ್ಳರು ಖಾಲಿ ನಿವೇಶನ ಅತಿಕ್ರಮ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಒಟ್ಟು 64 ಬಡಾವಣೆಗಳಲ್ಲಿ ಲ್ಯಾಂಡ್ ಆಡಿಟ್ ಕಾರ್ಯವನ್ನು ಸಮಾಲೋಚಕರಿಂದ ಕೈಗೊಳ್ಳಲಾಗಿದೆ.<br><br>ಅದರಂತೆ, ಪ್ರಾಧಿಕಾರದಿಂದ ಐತೀರ್ಪುಗೊಂಡಿರುವ ಪ್ರದೇಶಗಳಲ್ಲಿ ಅನಧಿಕೃತ ಒತ್ತುವರಿದಾರರನ್ನು ಗುರುತಿಸಲಾಗಿದೆ. ಸದರಿ ಒತ್ತುವರಿಯನ್ನು ಹಂತ ಹಂತವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>2008ನೇ ಸಾಲಿಗಿಂತ ಮೊದಲು ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮನೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 38[ಡಿ] ಅಡಿಯಲ್ಲಿ ದಂಡ ವಿಧಿಸಿ ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಸಕ್ರಮಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |
| ಆ) | ಭೂಗಳ್ಳರ ಜೊತೆ ಬೆಂಗಳೂರಿನ ನಗರಾಭಿವೃದ್ಧಿ ಪ್ರಾಧಿಕಾರದ ಕೆಲವು ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಲವು ಪ್ರಕರಣಗಳಲ್ಲಿ ಭೂಗಳ್ಳರ ಜೊತೆ ಪ್ರಾಧಿಕಾರದ ಕೆಲವು ಅಧಿಕಾರಿಗಳು ಶಾಮೀಲಾಗಿರುವ ಬಗ್ಗೆ ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳದಿಂದ ವಿಚಾರಣೆ ಕೈಗೊಂಡು ವಿಚಾರಣಾ ವರದಿಯ ಮೇರೆಗೆ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಲಾಗಿರುತ್ತದೆ. |
| ಇ) | ಬಂದಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಪ್ರಕರಣ ದಾಖಲಾಗಿವೆ; ಮತ್ತು ದಾಖಲಾದವರ ಮೇಲೆ ಕೈಗೊಂಡ ಕ್ರಮವೇನು; | "ಎ" ದರ್ಜೆಯಿಂದ "ಡಿ" ದರ್ಜೆ ವರೆಗಿನ ಅಧಿಕಾರಿ/ನೌಕರರ ವಿರುದ್ಧ ಇಲ್ಲಿಯವರೆಗೆ 14 ಕ್ರಿಮಿನಲ್ ಪ್ರಕರಣಗಳನ್ನು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಿಸಲಾಗಿದೆ. ಪ್ರಸ್ತುತ ತನಿಖೆ ವಿಚಾರಣಾ ಹಂತದಲ್ಲಿದೆ. |
| ಈ) | ಹೆಚ್.ಬಿ.ಆರ್. ಲೇಔಟ್ ಹೆಣ್ಣೂರು ವ್ಯಾಪ್ತಿಯಲ್ಲಿ (ಗೋವಿಂದಪುರ ಪೊಲೀಸ್ ಠಾಣೆ) ಎಷ್ಟು ಪ್ರಕರಣಗಳು ದಾಖಲಾಗಿವೆ? (ವಿವರ ನೀಡುವುದು) | ಹೆಚ್.ಬಿ.ಆರ್. ಲೇಔಟ್ ಹೆಣ್ಣೂರು ವ್ಯಾಪ್ತಿಯ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |

ಸಂಖ್ಯೆ: ನಅಇ 145 ಬೆಂಭೂಸ್ವಾ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ